# ರಾಜಧಾನಿಯಲ್ಲಿ ರಾಜ್ಯಭಾಷೆ ರಾಂಗ್!

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಾಗಿ (ಬಿಬಿಎಂಪಿ) ಬೆಳೆದು ನಿಂತಿದ್ದು, ಬೆಳೆವ ಹಾದಿಯಲ್ಲಿ ಕನ್ನಡವನ್ನೇ ನಿರ್ಲಕ್ಷಿಸಿದೆ. ಅದಕ್ಕೆ ಸ್ಪಷ್ಟ ಉದಾಹರಣೆ ಈ ಚಿತ್ರಗಳು. ರಾಜ್ಯ ರಾಜಧಾನಿ ಬೆಂಗಳೂರಿನಲ್ಲಾಗುತ್ತಿರುವ ಕನ್ನಡದ ಕಗ್ಗೊಲೆಗೆ ಸ್ಪಷ್ಟ ನಿದರ್ಶನವಿದು. ಇಲ್ಲಿ ಅಂಡಾಳಮ್ಮ ಎಂಬುದನ್ನು ಆನ್‌ಡಲ್ಲಮ್ಮ ಎಂದು ಬರೆಯಲಾಗಿದೆ. ಬಿಬಿಎಂಪಿಯ ಇಂತಹ ಕನ್ನಡ ಭಾಷಾ ಪ್ರೇಮವನ್ನು ಹೇಗೆ ವರ್ಣಿಸಬೇಕೆಂದು ಅರ್ಥವಾಗುತ್ತಿಲ್ಲ. ಬೆಂಗಳೂರಿನೆಲ್ಲೆಡೆ ಇಂತಹ ತಪ್ಪು ತಪ್ಪಾದ ಕನ್ನಡದ ಬಳಕೆಯು ಸಹಜವಾಗಿರುವುದು ಶೋಚನೀಯ.

–ಕೆ. ಎಸ್. ಸೋಮೇಶ್ವರ, ಬೆಂಗಳೂರು




# ನಿರುಪದ್ರವಿ ಉಡ!

'ಉಡ ಹಿಡಿದಂಗ ಹಿಡದಿಯಲ್ಲಾ' ಎಂಬುದು ನಮ್ಮ ಭಾಗದಲ್ಲಿ ಹೆಚ್ಚಾಗಿ ಕೇಳಿಬರುವ ಜನಜನಿತ ಮಾತು. ಉಡದ ಹಿಡಿತ ಅಷ್ಟು ಬಲವಾಗಿರುವುದರಿಂದ ಈ ಮಾತು ಹುಟ್ಟಿಕೊಂಡಿರಬಹುದು. ಆದರೆ ಅಂತಹ ಉಡವನ್ನೇ ಸಂಡೂರಿನಲ್ಲಿ ತುಸುವೂ ಮಿಸುಕಾಡದಂತೆ ಹಿಡಿದಿಟ್ಟಿದ್ದಾನೆ ಮನುಷ್ಯನೆಂಬ ಪ್ರಾಣಿ. ಉಡದ ಮಾಂಸವು ಪಾರ್ಶ್ವವಾಯು, ನರದೌರ್ಬಲ್ಯ ಮುಂತಾದ ರೋಗಗಳಿಗೆ ರಾಮಬಾಣವೆಂದು ನಂಬಲಾಗಿದೆ. ಆದರೆ ಈ ನಂಬುಗೆಗೆ ಯಾವುದೇ ವೈಜ್ಞಾನಿಕ ಪುರಾವೆಗಳು ಇಲ್ಲ. ಹೀಗಾಗಿ ಇದು ಮೌಢ್ಯವಾಗಿಯೇ ಉಳಿದಿದೆ. ಮೌಢ್ಯಗಳನ್ನು ಉಡದ ಮೇಲೆ ಹೇರಿ ಅವುಗಳನ್ನು ಮನುಷ್ಯ ಬೇಟೆಯಾಡುತ್ತಿದ್ದಾನೆ. ಆಹಾರವಾಗಿಯೂ ಬಳಸುತ್ತಿದ್ದಾನೆ. ಏಪ್ರಿಲ್–ಅಕ್ಟೋಬರ್ ಉಡಗಳ ಸಂತಾನೋತ್ಪತ್ತಿಯ ಕಾಲ. ಹೆಣ್ಣು ಉಡ ನೆಲದಲ್ಲಿ ಗುಣಿ ತೋಡಿ ಮೊಟ್ಟೆಗಳನ್ನಿಟ್ಟು ಮುಚ್ಚುತ್ತದೆ. ಇದರ ಬಾಲವು ದೇಹಕ್ಕೆ ಹೋಲಿಸಿದರೆ ತುಸು ಉದ್ದವಾಗಿದ್ದು, ಇವುಗಳನ್ನು ಬೇಟೆಯಾಡುವುದು ಕಾನೂನು ಬಾಹಿರವಾಗಿದೆ.

–ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ





# ಈಚಲು ಹಣ್ಣು!

ಇದು ಈಚಲು ಹಣ್ಣು. ಏಪ್ರಿಲ್‌ನಿಂದ ಜೂನ್‌ವರೆಗೆ ಹೆಚ್ಚಾಗಿ ಕಾಣುವ ಈ ಹಣ್ಣಿನ ರುಚಿಯು ಸ್ವಲ್ಪ ಸಿಹಿ. ನೋಡಲು ನೇರಳೆ ಹಣ್ಣಿನಂತೆಯೇ ಕಾಣುವ ಈ ಹಣ್ಣು, ಕಾಯಿಯ ಹಂತದಲ್ಲಿ ತಿಳಿ ಕೇಸರಿ/ಹಳದಿ ಬಣ್ಣದಿಂದ ಕೂಡಿರುತ್ತದೆ. ಈಚಲು ಗಿಡದಲ್ಲಿ ಕಾಯಿಗಳ ಮತ್ತು ಹಣ್ಣುಗಳ ಗೊಂಚಲು ನೋಡಲು ತುಂಬಾ ಚೆಂದ. ಇದರ ಜೊತೆಗೆ ಈ ಬೇಸಿಗೆಯಲ್ಲಿ ಕೌಳಿಹಣ್ಣು, ಮುಳ್ಳು ಹಣ್ಣು, ದಾಸವಾಳ ಹಣ್ಣು, ಪರಗಿಹಣ್ಣು ಇತ್ಯಾದಿ ಹೆಸರೇ ಈಗ ಮರೆಯಾಗುವಂಥ ಹಣ್ಣುಗಳು ನಾವು ಚಿಕ್ಕವರಿದ್ದಾಗ ನಮಗೆ ಸಿಗುತ್ತಿದ್ದವು. ಈಗ ಇಂತಹ ಹಣ್ಣುಗಳ ಗಿಡಮರಗಳ ಸಂತತಿಯೂ ಮರೆಯಾಗುತ್ತಿದೆ.

ನಮ್ಮ ಊರಿನ ಸುತ್ತಮುತ್ತ ಈಗ ಈಚಲು ಗಿಡ/ಮರದ ಸಂತತಿ ಸಂಪೂರ್ಣ ನಾಶವಾಗಿದೆ. ನನ್ನ ಅಮ್ಮ ಸೇರಿದಂತೆ ಊರಿನ ಕೆಲ ಮಹಿಳೆಯರು ಈಚಲು ಮರದ ಹುಲ್ಲು ತಂದು ಒಣಗಿಸಿ ಅದರಿಂದ ಚಾಪೆ ಕಸಬರಿಗೆ ಮಾಡುತ್ತಿದ್ದರು. ಹುಡುಗರಾಗಿದ್ದಾಗ ನಾನು ಸ್ನೇಹಿತರ ಜೊತೆಗೂಡಿ ಪ್ರತಿ ಬೇಸಿಗೆಯಲ್ಲಿ ಈ ಹಣ್ಣುಗಳನ್ನು ಸವಿಯುತ್ತಿದ್ದೆ. ಇದೆಲ್ಲ ನೆನಪಿಗೆ ಬಂದದ್ದು ಈಚೆಗೆ ಮೂಡಿಗೆರೆ ಸಮೀಪದ 'ಎತ್ತಿನಭುಜ' ಬೆಟ್ಟಕ್ಕೆ ಹೋಗುವ ದಾರಿಯಲ್ಲಿ ಈಚಲು ಗಿಡಗಳು ಕಂಡಾಗ.

–ಪಿ. ಹೆಚ್. ಪಾಟೀಲ್, ರಾಣೆಬೆನ್ನೂರ

## ನೀವೂ ಬರೆಯಿರಿ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ 'ನಿಮ್ಮ ಪುಟ' ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly